**ಫ್ರಾಸಾಃ 1 ಚಾಸಾಃ 1**

ದಿನಾಂಕಃ 14-02-2022 ರಂದು ಸಾಕ್ಷಿ ಕ್ರಮವಾಗಿ ಪ್ರಮಾಣ ವಚನ ಮಾಡಿದನು

ಪಾಟೀ ಸವಾಲುಃ ಆರೋಪಿತನ ಪರವಾಗಿ ಶ್ರೀ ಮಹಮದ್ ಹನೀಫ್ ವಕೀಲರಿಂದಃ

ಪರವಾನಿಗೆ ನವೀಕರಣ ಕೋರಿ ನಾನೇ ಅರ್ಜಿ ಕೊಟ್ಟಿದ್ದೆ. ನವೀಕರಣಕ್ಕಾಗಿ ನಮ್ಮ ಟ್ರಸ್ಟ್ ನಲ್ಲಿ ಠರಾವು ಹೊರಡಿಸಲಾಗಿತ್ತು, ಆ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ಟ್ರಸ್ಟ್ ಠರಾವು ಆದ ಒಂದೆರಡು ತಿಂಗಳಿಗೆ ಅರ್ಜಿ ಕೊಟ್ಟಿದ್ದೇನೆ. ದಿನಾಂಕಃ 04-06-2018 ರಂದು ಅರ್ಜಿ ಕೊಟ್ಟಿದ್ದೇನೆ. ನನ್ನ ತಂದೆ ಅರ್ಜಿಗೆ ಸಹಿ ಮಾಡಿದ್ದರು, ನಾನು ಅರ್ಜಿಯನ್ನ ಕಛೇರಿಗೆ ಸಲ್ಲಿಸಿದೆ. ನಾನು ಕಛೇರಿಯ ಟಪಾಲ್ ಸೆಕ್ಷನ್-ನಲ್ಲಿ ಅರ್ಜಿ ಕೊಟ್ಟಿದ್ದೇನೆ. ನನ್ನ ಅರ್ಜಿಗೆ ಕಛೇರಿಯಿಂದ ಸ್ವೀಕೃತಿ ಕೊಟ್ಟಿದ್ದಾರೆ. ನಾನು ಕೊಟ್ಟ ಅರ್ಜಿಯ ನಕಲನ್ನ ಎಸಿಬಿ ರವರಿಗೆ ಕೊಟ್ಟಿದ್ದೇನೆ.

ರುಜು ಮಾಡಿದ ಅರ್ಜಿಯ ನಕಲು ಈಗ ನನಗೆ ತೋರಿಸಿದ ದಾಖಲೆ ಆಗಿದೆ. ಈ ದಾಖಲೆಯನ್ನ ಆರೋಪಿ ನಿಶಾನೆ-1 ಎಂದು ಗುರುತಿಸಲಾಯಿತು. ಅ.ನಿ-1 ದಾಖಲೆಯ ಅಸಲು ಅರ್ಜಿಯನ್ನ ಕೂಡ ಬಿಇಒ ಕಛೇರಿಗೆ ಕೊಟ್ಟಿದ್ದೆ. ಅರ್ಜಿಯನ್ನ ಜೆರಾಕ್ಸ್ ಮಾಡಿಸಿ ಅದರ ಮೇಲೆ ಸೀಲ್ ಹೊಡೆದು ಸ್ವೀಕೃತಿ ಸಹಿ ಹಾಕಿಕೊಡುತ್ತಾರೆ. ಅದೇ ಅರ್ಜಿಯನ್ನ ನಾನು ದೂರು ಕೊಟ್ಟಾಗ ಎಸಿಬಿ ರವರಿಗೆ ಕೊಟ್ಟಿದ್ದೇನೆ. ಆರೋಪಿ ನಿಶಾನೆ-1 ಅರ್ಜಿಯ ನಕಲನ್ನ ನಾನು ದೂರಿನ ಜೊತೆ ಎಸಿಬಿ ಕಛೇರಿಗೆ ಕೊಟ್ಟಿದ್ದೇನೆ. ನವೀಕರಣಕ್ಕೆ ಅರ್ಜಿ ಕೊಟ್ಟಾಗಿನಿಂದ ಎಸಿಬಿ ಕಛೇರಿಗೆ ದೂರು ಕೊಟ್ಟಿರುವ ದಿನಗಳ ಮಧ್ಯೆ ನಾನು ಅನೇಕ ಬಾರಿ ಬಿಇಒ ಕಛೇರಿಗೆ ಹೋಗಿದ್ದೇನೆ. 2-3 ಬಾರಿ ಹೋಗಿರಬಹುದು. ಆರೋಪಿಯನ್ನ ನಾನು 2-3 ಬಾರಿ ಭೇಟಿಯಾಗಿದ್ದೇನೆ. ಬಿಇಒ ಕಛೇರಿಯ ಕಾಂಪೌಂಡ್ ಒಳಗೆ ಶಿಕ್ಷಣ ಇಲಾಖೆಯ ಬೇರೆ ಕಛೇರಿಗಳು ಇವೆ. ಬಿಇಒ ಕಛೇರಿಯ ಕಟ್ಟಡದ ಉದ್ದಳತೆ ಹೇಳಲು ನನಗೆ ಗೊತ್ತಿಲ್ಲ. ಬಿಇಒ ಕಛೇರಿಯ ಕಟ್ಟಡದಲ್ಲಿ ಮೂರು ಕೊಠಡಿಗಳು ಇವೆ. ಒಂದು ಕೊಠಡಿಯಲ್ಲಿ ಬಿಇಒ ಇನ್ನೆರೆಡು ಕೊಠಡಿಗಳಲ್ಲಿ ಸಿಬ್ಬಂದಿಗಳು ಇದ್ದಾರೆ. ಬಿಇಒ ಕೊಠಡಿಗೆ ನೇರವಾಗಿ ಒಂದು ಪ್ರವೇಶದ್ವಾರ ಮತ್ತು ಉಳಿದ ರೂಮುಗಳಿಗೂ ಕೂಡ ಬಾಗಿಲುಗಳು ಇದ್ದು ಪ್ರವೇಶವಿದೆ. ಬಿಇಒ ಕೂರುವ ಕೊಠಡಿಯ ಸುತ್ತಳತೆ ಮತ್ತು ಉದ್ದಳತೆ ನನಗೆ ಗೊತ್ತಿಲ್ಲ. ಬಿಇಒ ಕಛೇರಿಯಲ್ಲಿ ಎಷ್ಟು ಜನ ಸಿಬ್ಬಂದಿಗಳು ಇದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಬಿಇಒ ಕೊಠಡಿಯ ಬಾಗಿಲು ದಕ್ಷಿಣದ ದಿಕ್ಕಿಗೆ ಇರಬಹುದು. ಆ ಕೊಠಡಿಗೆ ಎರಡು ಕಿಟಕಿಗಳು ಇವೆ.

ಒಂದು ಕಿಟಕಿ ಉತ್ತರಕ್ಕೆ ಮತ್ತೊಂದು ಕಿಟಕಿ ದಕ್ಷಿಣಕ್ಕೆ ಇವೆ. ನಾನು ಮೊದಲನೇಯ ಬಾರಿ ನವೀಕರಣ ಮಾಡಿಕೊಡಿ ಅಂತ ದಿನಾಂಕಃ 30-10-2018 ರಂದು ಕೋರಿಕೊಂಡೆ. ನಾನು ಕೋರಿಕೆ ಮಾಡುವ ಕಾಲಕ್ಕೆ ಸ್ಥಳ ತನಿಖೆಯಾಗಿದ್ದು ಸ್ಥಳ ತನಿಖಾ ವರದಿಯು ಕೂಡ ಸಲ್ಲಿಕೆಯಾಗಿತ್ತು. ನಾನು 30 ನೇ ತಾರೀಖು ಆರೋಪಿಯನ್ನ ಭೇಟಿಯಾದಾಗ ಬೇರೆ ಯಾರೂ ಇರಲಿಲ್ಲ. ನಾನು ಹೋದಾಗ ಮದ್ಯಾಹ್ನ ಸುಮಾರು 3-00 ಘಂಟೆಯಾಗಿರಬಹುದು. ನಾನು ಬಿಇಓರವರನ್ನ ಭೇಟಿಯಾದಾಗ ಉಳಿದ ಸಿಬ್ಬಂದಿಗಳು ಯಾರೂ ಇರಲಿಲ್ಲ. ನವೀಕರಣ ಕಡತ ಕಛೇರಿಯ ಗುಮಾಸ್ತನ ಹತ್ತಿರ ಇತ್ತು. ನಾನು 30-10-2018 ರಂದು ಆರೋಪಿಯನ್ನ ನವೀಕರಣ ಮಾಡಿಕೊಡುವಂತೆ ಕೋರಿಕೆ ಮಾಡಿದಾಗ ಆರೋಪಿ ನಮ್ಮ ಶಾಲೆಗೆ ಸಂಬಂಧಿಸಿದ ಕಡತವನ್ನ ಅವನ ಕೊಠಡಿಗೆ ತರಸಿಕೊಳ್ಳಲಿಲ್ಲ. 2018 ರಿಂದ ಐದು ವರ್ಷದ ಅವಧಿಗೆ ನವೀಕರಣ ಕೋರಿದ್ದೆವು. ನಾವು ಯಾವ ವರ್ಷದಿಂದ ಯಾವ ವರ್ಷಕ್ಕೆ ನವೀಕರಣ ಬೇಕೆಂದು ಕೇಳಿರಲಿಲ್ಲ. ಅ.ನಿ.16 ನಾನು ನ್ಯಾಯಾಲಯದ ಮುಂದೆ ಗುರುತಿಸುವುದಕ್ಕೂ ಪೂರ್ವದಲ್ಲಿ ನನಗೆ ಗೊತ್ತಿರಲಿಲ್ಲ. ನಾನು 30-10-2018 ರಂದು ಆರೋಪಿಯ ಬಳಿ ಹೋದಾಗ ನನಗೂ ಮತ್ತು ಆತನಿಗೂ 15 ನಿಮಿಷಗಳ ಕಾಲ ಮಾತುಕತೆಯಾಯಿತು. 15 ನಿಮಿಷಗಳ ಕಾಲ ನಾವು ಮಾತನಾಡುವಾಗ ಬೇರೆ ಸಿಬ್ಬಂದಿಗಳು ಬಂದು ಹೋಗಿರುವುದನ್ನ ನಾನು ಗಮನಿಸಿರಲಿಲ್ಲ, ಬರುತ್ತಿದ್ದರು ಮತ್ತು ಹೋಗುತ್ತಿದ್ದರು. ಈ ಸಮಯದಲ್ಲಿ ರೂ.25000/- ಗಳಿಗೆ ಆರೋಪಿ ಬೇಡಿಕೆ ಇಟ್ಟ.

ಆರೋಪಿತನು ಬೇಡಿಕೆಯನ್ನ ಕೈ ಬೆರಳುಗಳಿಂದ ಸನ್ನೆ ಮಾಡಿ ಇಟ್ಟ. ಆರೋಪಿತನು ಕೈ ಬೆರಳುಗಳನ್ನ ಅಲುಗಾಡಿಸಿ ರೂ.25000/- ಕೊಡುವಂತೆ ಬೇಡಿಕೆ ಇಟ್ಟ. ನಾನು ರೂ.15000/- ಆಗ ಕೊಟ್ಟೆ ಬಾಕಿ ರೂ.10000/-ವನ್ನ ಕೈಬೆರಳುಗಳಲ್ಲಿ ಮತ್ತು ಬಾಯಲ್ಲಿ ಕೋಡ್ ವರ್ಡ್ ಗಳ ಮೂಲಕ ಬೇಡಿಕೆ ಇಟ್ಟ. ಆರೋಪಿತನ ಮಾತುಕತೆಯನ್ನ ನಾನು ಫೋನಿನಲ್ಲಿ ರೆಕಾರ್ಡ್ ಮಾಡಿಕೊಂಡೆ. ಆರೋಪಿತನು ಕೈ ಬೆರಳುಗಳಿಂದ ನನಗೆ ಲಂಚಕ್ಕೆ ಬೇಡಿಕೆ ಇಟ್ಟ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತನು ಕೈ ಬೆರಳುಗಳಿಂದ ಮತ್ತು ಬಾಯಿಯ ಮೂಲಕ ಕೋಡ್ ವರ್ಡ್-ಗಳಿಂದ ಉಳಿದ ಹತ್ತು ಸಾವಿರ ರೂಪಾಯಿಯನ್ನ ಕೊಡು ಅಂತ ನನಗೆ ಕೇಳಿದ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 30-10-2018 ರಂದು ನಾನು ಬಿಇಓ ಕಛೇರಿಗೆ ಹೋಗಿಯೇ ಇಲ್ಲ ಎನ್ನುವುದು ಸುಳ್ಳು. ಸ್ಥಳ ತನಿಖೆ ಮಾಡಲು ಬಿಇಓ ಕಛೇರಿಯಿಂದ ತಿಮ್ಮರಾಯಪ್ಪ ಬಂದಿದ್ದರು. ತಿಮ್ಮರಾಯಪ್ಪ ಯಾವ ನಮೂನೆಯ ಸ್ಥಳ ತನಿಖೆಯ ವರದಿ ಕೊಟ್ಟ ಎನ್ನುವುದು ನನಗೆ ಗೊತ್ತಿಲ್ಲ. ಮಂಜೂರು ಪ್ರಕಾರ ನಮ್ಮ ಟ್ರಸ್ಟ್ ಕರ್ತವ್ಯ ನಿರ್ವಹಿಸುತ್ತಿಲ್ಲ ಮತ್ತು ಕೆಲವು ಮಾರ್ಪಾಡುಗಳು ಆಗಬೇಕಾಗಿದೆ ಅಂತ ತಿಮ್ಮರಾಯಪ್ಪ ವರದಿ ಮಾಡಿದ್ದ ಎನ್ನುವುದು ಸುಳ್ಳು. ದಿನಾಂಕಃ 29-10-2018 ರಂದು ನಮ್ಮ ಕಡತ ನವೀಕರಣಕ್ಕಾಗಿ ಎಲ್ಲಾ ಪ್ರಕ್ರೀಯೇ ಮುಗಿದು ಆರೋಪಿಯ ಬಳಿ ಬಂತು ಎನ್ನುವುದು ನನಗೆ ಗೊತ್ತಿಲ್ಲ. ದಿನಾಂಕಃ 29-10-2018 ರಂದು ನವೀಕರಣ ಮಾಡಬಹುದು ಅಂತ ಆರೋಪಿ ಅಧಿಕಾರಿ ಆದೇಶ ಮಾಡಿದರು ಎನ್ನುವುದು ನನಗೆ ಗೊತ್ತಿಲ್ಲ.

ನನ್ನ ಮತ್ತು ಆರೋಪಿತನ ಸಂಭಾಷಣೆಯನ್ನ ನಾನು ರೆಕಾರ್ಡ್ ಮಾಡಿಕೂಂಡಿದ್ದೇನೆ. ನಮ್ಮ ಸಂಪೂರ್ಣ ಸಂಭಾಷಣೆ ರೆಕಾರ್ಡ್ ಆಗಿದೆ. ನಮ್ಮ ಸಂಭಾಷಣೆ 10-15 ನಿಮಿಷಗಳು ಆಗಿರಬಹುದು. ನಾನು ಸುಮಾರು ಮದ್ಯಾಹ್ನ 03-00 ಘಂಟೆಗೆ ಆರೋಪಿಯ ಕಛೇರಿಗೆ ಹೋಗಿದ್ದೆ, ಅವರ ಬಳಿ ಮಾತುಕತೆಯಾದ ಬಳಿಕ 03-20 ಅಥವಾ 03-30 ಕ್ಕೆ ನಾನು ಅವರ ಕಛೇರಿಯಿಂದ ಹೊರಗೆ ಬಂದಿರಬಹುದು. ನಮ್ಮ ಗ್ರಾಮ ಆರೋಪಿತನ ಕಛೇರಿಯಿಂದ 26 ಕಿಮೀ., ದೂರದಲ್ಲಿದೆ. ಆರೋಪಿತನು ಲಂಚಕ್ಕೆ ಬೇಡಿಕೆ ಇಟ್ಟಿರುವ ಸಂಗತಿಯನ್ನ ನಾನು ನಮ್ಮ ಟ್ರಸ್ಟ್‌ನ ಪದಾಧಿಕಾರಿಗಳಿಗೆ ತಿಳಿಸಿದ್ದೇನೆ. ಅದೇ ದಿನ ಸಂಜೆ 07-00 ಘಂಟೆ ಸುಮಾರಿಗೆ ನಾನು ಆರೋಪಿತನ ಲಂಚ ಬೇಡಿಕೆಯನ್ನ ಟ್ರಸ್ಟ್‌ನ ಪದಾಧಿಕಾರಿಗಳಿಗೆ ತಿಳಿಸಿದೆ. ನನ್ನ ತಾಯಿ ಟ್ರಸ್ಟ್‌ನ ಅಧ್ಯಕ್ಷಕರು. ಟ್ರಸ್ಟ್‌ನ ಕಾರ್ಯದರ್ಶಿ ನನ್ನ ತಂದೆ. ಆರೋಪಿತನು ಮಾಡಿರುವ ಲಂಚ ಬೇಡಿಕೆಯ ಬಗ್ಗೆ ಎಸಿಬಿಗೆ ದೂರು ಕೊಡಬೇಕು ಅಂತ ಟ್ರಸ್ಟ್‌ನ ಪದಾಧಿಕಾರಿಗಳು ಚರ್ಚೆ ಮಾಡಲಿಲ್ಲ. ನನ್ನ ತಂದೆ ಎಸಿಬಿಗೆ ದೂರು ಕೊಡಲು ನನಗೆ ಹೇಳಲಿಲ್ಲ, ಆದರೆ ನಾನು ಆರೋಪಿ ಲಂಚ ಬೇಡಿಕೆಯನ್ನ ಅವರ ಮುಂದೆ ಇಟ್ಟಾಗ ನನ್ನ ತಂದೆ ತುಂಬಾ ನೊಂದುಕೊಂಡರು, ಆದ್ದರಿಂದ ನಾನೇ ಎಸಿಬಿಗೆ ದೂರು ಕೊಟ್ಟೆ. ಆರೋಪಿ ನನ್ನಲ್ಲಿ ಯಾವುದೇ ಲಂಚವನ್ನ ನವೀಕರಣಕ್ಕಾಗಿ ಕೇಳಿಲ್ಲ ಎನ್ನುವುದು ಸುಳ್ಳು. ನಾನು ಆರೋಪಿ ಲಂಚ ಕೇಳುತ್ತಿದ್ದಾನೆ ಅಂತ ನನ್ನ ತಂದೆಗಾಗಲೀ ಅಥವಾ ಟ್ರಸ್ಟ್‌ನ ಪದಾಧಿಕಾರಿಗಳಾಗಲೀ ತಿಳಿಸಿಲ್ಲ ಎನ್ನುವುದು ಸರಿಯಲ್ಲ.

ಆರೋಪಿ ಮತ್ತು ನನ್ನ ನಡುವೆ ಲಂಚ ಬೇಡಿಕೆಯ ಯಾವುದೇ ಸಂಭಾಷಣೆ ಆಗಿಲ್ಲ ಮತ್ತು ನಾನು ಯಾವುದೇ ಸಂಭಾಷಣೆಯನ್ನ ರೆಕಾರ್ಡ್ ಮಾಡಿಕೊಂಡಿಲ್ಲ ಎನ್ನುವುದು ಸರಿಯಲ್ಲ. ದಿನಾಂಕಃ **02-11-2018** ರಂದು ಮದ್ಯಾಹ್ನ **02-00** ಘಂಟೆಗೆ ನಾನು ಎಸಿಬಿ ಕಛೇರಿಗೆ ಬಂದೆ. ಎಸಿಬಿ ಕಛೇರಿಯವರು ನನಗೆ ಮೊದಲು ಪರಿಚಯವಿರಲಿಲ್ಲ. ನಾನು ದೂರು ಕೊಟ್ಟಾಗ ಅವರ ಪರಿಚಯವಾಯಿತು. ನಾನೇ ದೂರನ್ನ ತಯಾರು ಮಾಡಿಕೊಂಡು ತಂದಿದ್ದೆ. ದೂರನ್ನ ಎಸಿಬಿ ಕಛೇರಿಯಲ್ಲಿ ಡಿವೈಎಸ್‌ಪಿ ಪುರುಶೋತ್ತಮ್ ರವರಿಗೆ ಕೊಟ್ಟೆ. ಪುರುಶೋತ್ತಮ್ ರವರು ದಾಳಿ ಮಾಡಲು ಬಂದಿದ್ದರು. ಸಾಕ್ಷಿದಾರರನ್ನ ನಾನು ದೂರು ಕೊಟ್ಟ ಒಂದು ಘಂಟೆಯ ಒಳಗೆ ಕರೆಸಿದರು. ಸಾಕ್ಷಿದಾರರು ಎಸಿಬಿ ಕಛೇರಿಗೆ ಬಂದಿರಲಿಲ್ಲ, ನಾನು ಲಂಚ ಬೇಡಿಕೆಯ ಹಣವನ್ನ ಕೊಟ್ಟಿಲ್ಲ, ಲಂಚದ ನೋಟುಗಳಿಗೆ ಫಿನಾಫ್ತಲಿನ್ ಪೌಡರನ್ನ ಲೇಪಿಸಿರಲಿಲ್ಲ ಮತ್ತು ಯಾವುದೇ ಪ್ರಕ್ರೀಯೇ ಜರುಗಲಿಲ್ಲ ಎನ್ನುವುದು ಸುಳ್ಳು. ನೋಟುಗಳ ವಿವರವನ್ನ ಬಿಳಿ ಹಾಳೆಯ ಮೇಲೆ ಬರೆದುಕೊಂಡಿಲ್ಲ ಎನ್ನುವುದು ಸುಳ್ಳು. ಶ್ಯಾಮಲಾದೇವಿಯವರು ಫಿನಾಫ್ತಲಿನ್ ಪೌಡರನ್ನ ಲೇಪಿಸಿರುವ ನೋಟುಗಳನ್ನ ನನ್ನ ಜೇಬಿಗಿಟ್ಟರು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪ್ರಾಥಮಿಕ ಪಂಚನಾಮೆ ಜರುಗಲಿಲ್ಲ, ಯಾವುದೇ ಫೋಟೋಗಳನ್ನ ನಾನು ಹೇಳುವಂತೆ ತೆಗೆಯಲಿಲ್ಲ ಮತ್ತು ಯಾವುದೇ ಪ್ರಕ್ರೀಯೇ ಜರುಗಲಿಲ್ಲ ಎನ್ನುವುದು ಸುಳ್ಳು. ನಾನು ನಮ್ಮ ಗ್ರಾಮದಿಂದ ಕೋಲಾರಕ್ಕೆ ಬಸ್ಸಿನಲ್ಲಿ ಬಂದಿದ್ದೆ.

ಸುಮಾರು 7-8 ಜನ ಆರೋಪಿ ಕಛೇರಿಗೆ ಹೋಗಲು ಕೋಲಾರ ಬಿಟ್ಟೆವು. ಎಸಿಬಿ ಕಛೇರಿಯಲ್ಲಿ ನನ್ನ ಮತ್ತು ಇತರರ ಅಂಗಶೋಧನೆ ಆಯಿತು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅಲ್ಲಿ ಯಾವುದೇ ಅಂಗಶೋಧನೆ ಮಾಡಲಿಲ್ಲ ಎನ್ನುವುದು ಸರಿಯಲ್ಲ. ಆರೋಪಿ ಕಛೇರಿಗೆ ನಾವು ಹೋದಾಗ ಸುಮಾರು ಸಂಜೆ 05-30 ಘಂಟೆಯಾಗಿತ್ತು. ನಾವು ಹೋದಾಗ ಆರೋಪಿಯ ಜೊತೆ ಬೇರೆ ಸಿಬ್ಬಂದಿಗಳು ಇದ್ದರು. ಸಿಬ್ಬಂದಿಗಳನ್ನ ಆರೋಪಿ ಎಲ್ಲಿ ಹೋಗಿದ್ದಾರೆ ಅಂತ ಕೇಳಿದೆವು. ಸಿಬ್ಬಂದಿಗಳು ಆರೋಪಿ ಕಛೇರಿಯಲ್ಲಿಲ್ಲ ಅಂತ ಹೇಳಿದರು. ಆನಂತರ ನಾನು ಅವರಿಗೆ ಫೋನ್ ಮಾಡಿದೆ. ನಾನು ಆರೋಪಿಗೆ ಫೋನ್ ಮಾಡಿದ್ದನ್ನ ರೆಕಾರ್ಡ್ ಆಗಿರಬಹುದು. ನಾನು ಆರೋಪಿಗೆ ಫೋನ್ ಮಾಡಿದಾಗ ಬೆಂಗಳೂರಿಗೆ ಹೋಗುತ್ತಿದ್ದೇನೆ ಅಂತ ಹೇಳಿದ ಪ್ರತ್ಯುತ್ತರವೂ ಕೂಡ ರೆಕಾರ್ಡ್ ಆಗಿದೆ, ಇದನ್ನು ನಾನು ಎಸಿಬಿ ಅಧಿಕಾರಿಗಳಿಗೆ ಕೊಟ್ಟಿದ್ದೇನೆ. ನಾನು ಆರೋಪಿಯ ಜೊತೆ ಫೋನಿನಲ್ಲಿ ಮಾತನಾಡುವಾಗ ಎಸಿಬಿಯವರು ನಮ್ಮ ಜೊತೆಯಲ್ಲಿದ್ದರು. ಈ ಸಂಭಾಷಣೆಯನ್ನ ಎಸಿಬಿ ಅಧಿಕಾರಿಗಳಿಗೆ ನಾನು ಕೊಟ್ಟಿರುವ ಬಗ್ಗೆ ಹೇಳಲು ನನಗೆ ಖಚಿತ ಇಲ್ಲ. ಪುನಃ ಎಸಿಬಿ ಕಛೇರಿಗೆ ವಾಪಸ್ಸು ಹೋದಾಗ ಸಂಜೆ 06-30 ಘಂಟೆಯಾಗಿತ್ತು. ಶ್ಯಾಮಲಾದೇವಿಯವರು ನನ್ನ ಜೇಬಿನಲ್ಲಿಟ್ಟ ಹಣ ಹಾಗೆಯೇ ಇತ್ತು. ಶ್ಯಾಮಲಾದೇವಿಯವರು ಎಸಿಬಿ ಕಛೇರಿಗೆ ವಾಪಸ್ಸು ಬಂದಾಗ ಅವರ ಕೈಯ್ಯನ್ನ ದ್ರಾವಣದಲ್ಲಿ ತೊಳೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ಎಸಿಬಿ ಕಛೇರಿಯಲ್ಲಿ ನನ್ನ ಜೇಬಿನಿಂದ ನೋಟುಗಳನ್ನ ಶ್ಯಾಮಲಾದೇವಿಯವರು ಎತ್ತಿಕೊಂಡರು.

ಅವರು ಆ ನೋಟುಗಳನ್ನ ಯಾರ ಕೈಗೆ ಕೊಟ್ಟರು ಎನ್ನುವುದು ನನಗೆ ಗೊತ್ತಿಲ್ಲ. ಎಸಿಬಿ ಅಧಿಕಾರಿಗಳು ಆ ನೋಟುಗಳನ್ನ ಸೀಲ್ ಮಾಡಿ ಇಟ್ಟರು. ಕವರ್-ನಲ್ಲಿ ಹಾಕಿ ಸೀಲ್ ಮಾಡಿ ಎಲ್ಲರ ಸಹಿ ಪಡೆದರು. ಆ ಕವರಿನ ಮೇಲೆ ನಾನು ಸಹಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ಕವರಿನ ಮೇಲೆ ಪಂಚ ಸಾಕ್ಷಿದಾರರಾದ ಶ್ರವಣ್ ಕುಮಾರ್ ಮತ್ತು ಶ್ಯಾಮಲಾದೇವಿ ಸಹಿ ಮಾಡಿದರು. ಸೋನಿ ವಾಯ್ಸ್ ರೆಕಾರ್ಡರನ್ನ ಕೂಡ ಲಕೋಟೆಗೆ ಹಾಕಿ ಸೀಲ್ ಮಾಡಿದರು. ಮಹಜರ್-ನಲ್ಲಿ ಇದೆಲ್ಲವನ್ನ ನಮೂದಿಸಿರಬಹುದು. ಅ.ನಿ-15 ರ ಪ್ರಕಾರ ಮಹಜರ್ ಮಾಡಲಾಯಿತು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

3 ನೇ ತಾರೀಖು ನಾನು ಬೆಳಗ್ಗೆ ಸುಮಾರು 09-00 ಘಂಟೆಗೆ ಎಸಿಬಿ ಕಛೇರಿಗೆ ಬಂದೆ. ಎಸಿಬಿ ಕಛೇರಿಗೆ ಪಂಚ ಸಾಕ್ಷಿದಾರರು ಆನಂತರ ಬಂದರು. ಶ್ರವಣ್ ಕುಮಾರ್ ಮತ್ತು ಶ್ಯಾಮಲಾದೇವಿ ಲಾಕ್-ನಲ್ಲಿಟ್ಟಿದ್ದ ಸೋನಿ ವಾಯ್ಸ್ ರೆಕಾರ್ಡರನ್ನ ಮತ್ತು ಹಣವನ್ನ ತೆಗೆದರು. ಕವರ್-ನಲ್ಲಿದ್ದ ನೋಟುಗಳನ್ನ ಹೊರತೆಗೆದರು, ಪುನಃ ಫಿನಾಫ್ತಲಿನ್ ಪುಡಿಯನ್ನ ಎಸಿಬಿ ಸಿಬ್ಬಂದಿಗಳು ಲೇಪನ ಮಾಡಿದರು. ಸದರಿ ನೋಟುಗಳನ್ನ ಪುನಃ ಶ್ಯಾಮಲಾದೇವಿಯವರು ನನ್ನ ಜೇಬಿಗಿಟ್ಟರು. 3 ನೇ ತಾರೀಖು ಕೂಡ ಶ್ಯಾಮಲಾದೇವಿಯವರ ಕೈ ಬೆರಳುಗಳನ್ನ ತೊಳೆದಿರಬಹುದು. 3 ನೇ ತಾರೀಖಿನಂದು ನಡೆಸಿದ ಪ್ರಕ್ರೀಯೇಯ ಬಗ್ಗೆ ಮತ್ತೊಂದು ಪಂಚನಾಮೆ ಬರೆದರು.

ಆ ಪಂಚನಾಮೆಗೆ ನಾನು, ಪಂಚರು, ಎಸಿಬಿ ಅಧಿಕಾರಿಗಳು ಸಹಿ ಮಾಡಿದರು. 3 ನೇ ತಾರೀಖು ಕೂಡ ಫೋಟೋಗಳನ್ನ ತೆಗೆಯಲಾಯಿತು. 3 ನೇ ತಾರೀಖು ಮಾಡಿತೆನ್ನಲಾದ ನಾನು ಹೇಳುವ ಎಲ್ಲಾ ಪ್ರಕ್ರೀಯೇಗಳು ಸುಳ್ಳು ಎನ್ನುವುದು ಸರಿಯಲ್ಲ.

3 ನೇ ತಾರೀಖು ಆರೋಪಿ ಕಛೇರಿಗೆ ಬೆಳಗ್ಗೆ 11-30 ಘಂಟೆ ಸುಮಾರಿಗೆ ತಲುಪಿದೆವು. ಆಗಲೂ ಕೂಡ ಆರೋಪಿ ಆ ಕಛೇರಿಯಲ್ಲಿರಲಿಲ್ಲ. ನಾನು ಅವರಿಗೆ ಫೋನ್ ಮಾಡಿದೆ, ಅದೂ ಕೂಡ ರೆಕಾರ್ಡ್ ಆಗಿದೆ. ಈ ರೆಕಾರ್ಡಿಂಗ್ ಸಂಭಾಷಣೆಯನ್ನೂ ಕೂಡ ಎಸಿಬಿ ಅಧಿಕಾರಿಗಳಿಗೆ ಕೊಟ್ಟಿದ್ದೇನೆ. ಸುಮಾರು ಮಧ್ಯಾಹ್ನ 12-00 ಘಂಟೆಗೆ ಆರೋಪಿ ಕಛೇರಿಗೆ ಬಂದರು. ಅವರು ಬಂದ ಮೇಲೆ ನಾನು ಹೋದೆ. ಆಗ ಬೇರೆ ಯಾರೂ ಇರಲಿಲ್ಲ. ನಾನು ಮತ್ತು ಆರೋಪಿ ಮಾತನಾಡುವಾಗ ಬೇರೆ ಯಾರೂ ಇರಲಿಲ್ಲ. ಕಿಟಕಿಯಲ್ಲಿ ಪಂಚರು ನೋಡುತ್ತಿದ್ದರು. ನಾನು ಮತ್ತು ಆರೋಪಿ ಮಾತನಾಡುತ್ತಿದ್ದ ಸ್ಥಳದಿಂದ 6-7 ಅಡಿ ದೂರದಲ್ಲಿದೆ. ಕಿಟಕಿಯ ಹೊರಗೆ ಪಕ್ಕದಲ್ಲಿಯೇ ಪಂಚರು ನಿಂತಿದ್ದರು. ನನ್ನ ಮತ್ತು ಆರೋಪಿಯ ನಡುವೆ 4-5 ನಿಮಿಷಗಳ ಮಾತುಕತೆಯಾಯಿತು. ತೆಲುಗು ಭಾಷೆಯಲ್ಲಿ ಮಾತನಾಡಿದೆವು. ಈ ಸಂಭಾಷಣೆ ನನ್ನ ಮೊಬೈಲ್-ನಲ್ಲಿ ರೆಕಾರ್ಡ್ ಮಾಡಿಕೊಂಡಿಲ್ಲ. ಸೋನಿ ರೆಕಾರ್ಡಿಂಗ್-ನಲ್ಲಿ ಮಾಡಿಕೊಂಡಿತ್ತು, ಆದರೆ ಅದರ ತಾಂತ್ರಿಕ ದೋಷದಿಂದ ರೆಕಾರ್ಡ್ ಆಗಿರಲಿಲ್ಲ.

3 ನೇ ತಾರೀಖು ನನಗೂ ಮತ್ತು ಆರೋಪಿತನ ನಡುವೆ ಯಾವುದೇ ಮಾತುಕತೆ ನಡೆದಿಲ್ಲ ಎನ್ನುವುದು ಸರಿಯಲ್ಲ. ಆರೋಪಿ ಹಣ ಸ್ವೀಕರಿಸಿ, ಗೃಹಪ್ರವೇಶ ಪತ್ರಿಕೆಯಲ್ಲಿ ಇಟ್ಟುಕೊಂಡ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಆ ದಿನ ಆರೋಪಿಗೆ ದುಡ್ಡು ಕೊಟ್ಟಿಲ್ಲ, ಆತ ನನ್ನಿಂದ ಯಾವುದೇ ನೋಟುಗಳನ್ನ ಸ್ವೀಕರಿಸಿಲ್ಲ ಮತ್ತು ಆತನಿಂದ ಯಾವುದೇ ನೋಟುಗಳನ್ನ ರಿಕವರಿ ಮಾಡಿಲ್ಲ ಎನ್ನುವುದು ಸರಿಯಲ್ಲ. ನಾನು ಸನ್ನೆ ಮಾಡಿದ ಮೇಲೆ ಪಂಚರು ಮತ್ತು ಎಸಿಬಿ ಸಿಬ್ಬಂದಿಗಳು ಒಳಗೆ ಬಂದರು. ಆಗ ಸಿಬ್ಬಂದಿಗಳು ಕಛೇರಿಯಲ್ಲಿದ್ದರು. ದಾಳಿಯಾದ ಮೇಲೆ ಎಸಿಬಿ ಅಧಿಕಾರಿಗಳು ಆರೋಪಿಯ ಕಛೇರಿಯಲ್ಲಿ ಸಂಜೆ 5-6 ಘಂಟೆಯವರೆಗೆ ಇದ್ದರು. ಆರೋಪಿಯ ಹತ್ತಿರದಿಂದ ಕವರಿನಲ್ಲಿದ್ದ ಹಣವನ್ನ ಎಸಿಬಿ ಅಧಿಕಾರಿಗಳು ಅಮಾನತ್ತು ಮಾಡಿಕೊಂಡರು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ಸಂದರ್ಭದಲ್ಲಿ ಎಸಿಬಿ ಅಧಿಕಾರಿಗಳು ಮಹಜರ್ ಮಾಡಿ, ಫೋಟೋ ತೆಗೆದರು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪಂಚನಾಮೆಯನ್ನ ಮಾಡಿದರು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ ಎಂದೂ ಕೂಡ ನನ್ನ ಜೊತೆ ಲಂಚಕ್ಕೆ ಬೇಡಿಕೆಯನ್ನಿಟ್ಟಿಲ್ಲ ಎನ್ನುವುದು ಸುಳ್ಳು. ಮಹಜರ್-ಗೆ ಪಂಚರು, ನಾನು, ಡಿಡಿಪಿಐ, ಕಛೇರಿಯ ಸಿಬ್ಬಂದಿಗಳು ಸಹಿ ಮಾಡಿದರು. ಆ ರೀತಿ ಯಾವುದೇ ಮಹಜರ್ ಮಾಡಲಿಲ್ಲ ಮತ್ತು ಸಿಬ್ಬಂದಿಗಳು ಸಹಿ ಮಾಡಲಿಲ್ಲ ಎನ್ನುವುದು ಸುಳ್ಳು.

ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ</u> ವಿಶೇಷ ಸಾರ್ವಜನಿಕ ಅಭಿಯೋಜಕರಿಂದ ಏನು ಇಲ್ಲ,

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

SD/-

(ಕೆ.ಆರ್.ನಾಗರಾಜ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.